## 2005 ರ ಕರ್ನಾಟಕ ಅಧಿನಿಯಮ ಸಂಖ್ಯೆ 10

## ಕರ್ನಾಟಕ ಧನವಿನಿಯೋಗ (ಲೇಖಾನುದಾನ) ಅಧಿನಿಯಮ, 2005

### ಪ್ರಕರಣಗಳ ಪಟ್ಟಿ

**ಪ್ರಕರಣಗಳು:**


1. ಸಂಕ್ಷಿಪ್ತ ಹೆಸರು
2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2005-2006ನೇ ಹಣಕಾಸು ವರ್ಷಕ್ಕಾಗಿ 1238655.53 ಲಕ್ಷ ರೂಪಾಯಿಗಳ ನೀಡಿಕೆ
3. ಧನವಿನಿಯೋಗ


### ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2005-2006ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 204ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

[2005ರ ವಿಧಾನಸಭೆಯ ವಿಧೇಯಕ ಸಂಖ್ಯೆ 9]

## 2005 ರ ಕರ್ನಾಟಕ ಅಧಿನಿಯಮ ಸಂಖ್ಯೆ 10

(2005 ರ ಮಾರ್ಚ್ ಮೂವತ್ತೊಂದನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಧನವಿನಿಯೋಗ (ಲೇಖಾನುದಾನ) ಅಧಿನಿಯಮ, 2005

(2005 ರ ಮಾರ್ಚ್ ಮೂವತ್ತೊಂದನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಲಾಗಿದೆ)

2005-2006ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ಅಧಿನಿಯಮ.

2005-2006 ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು.-** ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ಲೇಖಾನುದಾನ) ಅಧಿನಿಯಮ, 2005 ಎಂದು ಕರೆಯತಕ್ಕದ್ದು.

**2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2005-2006ನೇ ಹಣಕಾಸು ವರ್ಷಕ್ಕಾಗಿ 1238655.53 ಲಕ್ಷ ರೂಪಾಯಿಗಳ ನೀಡಿಕೆ.-** ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ, 2005-2006ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ **ಹನ್ನೆರಡು ಸಾವಿರದ ಮುನ್ನೂರ ಎಂಭತ್ತಾರು ಕೋಟಿ ಐವತ್ತೈದು ಲಕ್ಷದ ಐವತ್ಮೂರು ಸಾವಿರ ರೂಪಾಯಿಗಳಿಗೆ** ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು.

**3. ಧನವಿನಿಯೋಗ.-** ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

---

ಕರ್ನಾಟಕ ರಾಜ್ಯ ಪತ್ರದ ಭಾಗ-IVಎ ವಿಶೇಷ ಪತ್ರಿಕೆ ಸಂಖ್ಯೆ: 452 ದಿನಾಂಕ: 31.3.2005 ರಲ್ಲಿ ಪ್ರಕಟಿತ ಕಡತ ಸಂಖ್ಯೆ: ಸಂವ್ಯಶಾಇ 24 ಶಾಸನ 2005

**ಅನುಸೂಚಿ**

**(2 ಮತ್ತು 3ನೇ ಪ್ರಕರಣಗಳನ್ನು ನೋಡಿ)**

(ರೂ. ಲಕ್ಷಗಳಲ್ಲಿ)

| ಬೇಡಿಕೆ ಸಂಖ್ಯೆ | ಸೇವೆಗಳು ಮತ್ತು ಉದ್ದೇಶಗಳು | | ಮೀರದ ಮೊಬಲಗು | | ಒಟ್ಟು |
|---|---|---|---|---|---|
| | | | ವಿಧಾನಸಭೆಯಿಂದ ಪುರಸ್ಕೃತವಾದುದನ್ನು | ಸಂಚಿತ ನಿಧಿಯಿಂದ ಪ್ರಭೃತವಾದುದನ್ನು | |
| 01 | ಕೃಷಿ ಮತ್ತು ತೋಟಗಾರಿಕೆ | ರಾಜಸ್ವ<br>ಬಂಡವಾಳ | 34189.95<br>1030.25 | 7.01<br>- | 34196.96<br>1030.25 |
| 02 | ಪಶು ಸಂಗೋಪನೆ ಮತ್ತು ಮೀನುಗಾರಿಕೆ | ರಾಜಸ್ವ<br>ಬಂಡವಾಳ | 6999.25<br>211.58 | 2.08<br>- | 7001.33<br>211.58 |
| 03 | ಆರ್ಥಿಕ | ರಾಜಸ್ವ<br>ಬಂಡವಾಳ | 185317.82<br>3152.07 | 7.33<br>- | 185325.15<br>3152.07 |
| 04 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ | ರಾಜಸ್ವ<br>ಬಂಡವಾಳ | 5021.12<br>- | 2053.55<br>- | 7074.67<br>- |
| 05 | ಒಳಾಡಳಿತ ಮತ್ತು ಸಾರಿಗೆ | ರಾಜಸ್ವ<br>ಬಂಡವಾಳ | 39344.99<br>2660.73 | -<br>- | 39344.99<br>2660.73 |
| 06 | ಮೂಲಭೂತ ಸೌಕರ್ಯ | ಬಂಡವಾಳ | 18.50<br>6652.00 | -<br>- | 18.50<br>6652.00 |
| 07 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | ರಾಜಸ್ವ<br>ಬಂಡವಾಳ | 33998.21<br>17026.84 | -<br>- | 33998.21<br>17026.84 |
| 08 | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ | ರಾಜಸ್ವ<br>ಬಂಡವಾಳ | 7805.46<br>16.67 | 502.62<br>- | 8308.08<br>16.67 |
| 09 | ಸಹಕಾರ | ರಾಜಸ್ವ<br>ಬಂಡವಾಳ | 20573.03<br>99.84 | -<br>- | 20573.03<br>99.84 |
| 10 | ಸಮಾಜ ಕಲ್ಯಾಣ | ರಾಜಸ್ವ<br>ಬಂಡವಾಳ | 23207.67<br>3969.76 | -<br>- | 23207.67<br>3969.76 |
| 11 | ಮಹಿಳಾ ಮತ್ತು ಮಕ್ಕಳಾಭಿವೃದ್ಧಿ | ರಾಜಸ್ವ<br>ಬಂಡವಾಳ | 12227.41<br>465.29 | -<br>- | 12227.41<br>465.29 |
| 12 | ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು | ರಾಜಸ್ವ<br>ಬಂಡವಾಳ | 1885.14<br>26.66 | -<br>- | 1885.14<br>26.66 |
| 13 | ಆಹಾರ ಮತ್ತು ನಾಗರಿಕ ಸರಬರಾಜು | ರಾಜಸ್ವ<br>ಬಂಡವಾಳ | 17640.44<br>3.33 | 0.69<br>- | 17641.13<br>3.33 |
| 14 | ಕಂದಾಯ | ರಾಜಸ್ವ<br>ಬಂಡವಾಳ | 25408.55<br>373.63 | 34.00<br>- | 25442.55<br>373.63 |

(ರೂ. ಲಕ್ಷಗಳಲ್ಲಿ)

| ಬೇಡಿಕೆ ಸಂಖ್ಯೆ | ಸೇವೆಗಳು ಮತ್ತು ಉದ್ದೇಶಗಳು | | ಮೀರದ ಮೊಬಲಗು | | ಒಟ್ಟು |
|---|---|---|---|---|---|
| | | | ವಿಧಾನಸಭೆಯಿಂದ ಪುರಸ್ಕೃತವಾದುದನ್ನು | ಸಂಚಿತ ನಿಧಿಯಿಂದ ಪ್ರಭೃತವಾದುದನ್ನು | |
| 15 | ಮಾಹಿತಿ ತಂತ್ರಜ್ಞಾನ | ರಾಜಸ್ವ<br>ಬಂಡವಾಳ | 355.96<br>701.93 | -<br>- | 355.96<br>701.93 |
| 16 | ವಸತಿ | ರಾಜಸ್ವ<br>ಬಂಡವಾಳ | 4055.13<br>5155.15 | -<br>- | 4055.13<br>5155.15 |
| 17 | ಶಿಕ್ಷಣ | ರಾಜಸ್ವ<br>ಬಂಡವಾಳ | 161173.20<br>1715.48 | -<br>- | 161173.20<br>1715.48 |
| 18 | ವಾಣಿಜ್ಯ ಮತ್ತು ಕೈಗಾರಿಕೆ | ರಾಜಸ್ವ<br>ಬಂಡವಾಳ | 21731.87<br>1603.51 | 0.08<br>- | 21731.95<br>1603.51 |
| 19 | ನಗರಾಭಿವೃದ್ಧಿ | ರಾಜಸ್ವ<br>ಬಂಡವಾಳ | 52016.89<br>9188.08 | -<br>- | 52016.89<br>9188.08 |
| 20 | ಲೋಕೋಪಯೋಗಿ | ರಾಜಸ್ವ<br>ಬಂಡವಾಳ | 33205.15<br>37648.37 | -<br>8.33 | 33205.15<br>37656.70 |
| 21 | ಜಲಸಂಪನ್ಮೂಲ | ರಾಜಸ್ವ<br>ಬಂಡವಾಳ | 7252.25<br>106442.03 | -<br>- | 7252.25<br>106442.03 |
| 22 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು | ರಾಜಸ್ವ<br>ಬಂಡವಾಳ | 38697.22<br>2933.44 | -<br>- | 38697.22<br>2933.44 |
| 23 | ಕಾರ್ಮಿಕ | ರಾಜಸ್ವ<br>ಬಂಡವಾಳ | 3617.63<br>- | -<br>- | 3617.63<br>- |
| 24 | ಇಂಧನ | ರಾಜಸ್ವ<br>ಬಂಡವಾಳ | 70034.50<br>650.43 | 68.66<br>- | 70103.16<br>650.43 |
| 25 | ಕನ್ನಡ ಮತ್ತು ಸಂಸ್ಕೃತಿ | ರಾಜಸ್ವ<br>ಬಂಡವಾಳ | 1407.25<br>58.33 | -<br>- | 1407.25<br>58.33 |
| 26 | ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ | ರಾಜಸ್ವ<br>ಬಂಡವಾಳ | 11474.95<br>- | -<br>- | 11474.95<br>- |
| 27 | ಕಾನೂನು | ರಾಜಸ್ವ<br>ಬಂಡವಾಳ | 5025.79<br>- | -<br>- | 5025.79<br>- |
| 28 | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ | ರಾಜಸ್ವ<br>ಬಂಡವಾಳ | 1313.60<br>- | 37.19<br>- | 1350.79<br>- |

(ರೂ. ಲಕ್ಷಗಳಲ್ಲಿ)

| ಬೇಡಿಕೆ ಸಂಖ್ಯೆ | ಸೇವೆಗಳು ಮತ್ತು ಉದ್ದೇಶಗಳು | ಮೀರದ ಮೊಬಲಗು | | ಒಟ್ಟು |
|---|---|---|---|---|
| | | ವಿಧಾನಸಭೆಯಿಂದ ಪುರಸ್ಕೃತ ವಾದುದನ್ನು | ಸಂಚಿತ ನಿಧಿಯಿಂದ ಪ್ರಭೃತವಾದುದನ್ನು | |
| 29 | ಋಣ-ಮೇಲುಸ್ತುವಾರಿ ರಾಜಸ್ವ | - | 134284.74 | 134284.74 |
| | ಬಂಡವಾಳ | - | 74864.93 | 74864.93 |
| | ಒಟ್ಟು | **1026784.32** | **211871.21** | **1238655.53** |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಜಿ. ದಕ್ಷಿಣಾಮೂರ್ತಿ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.